# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮೈಸೂರು.

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಫೋನ್‌ನಂ: 0821 – 2417106
ಫ್ಯಾಕ್ಸ್ ನಂ: 0821 – 2417105
e-mail:agmtax@cescmysore.org
CIN:U40109KA2004SGCO35177

ನಿಗಮ ಕಾರ್ಯಾಲಯ,
ನಂ.29, ವಿಜಯ ನಗರ, 2ನೇ ಹಂತ,
ಹಿನಕಲ್, ಮೈಸೂರು.570017.


ಕ್ರಮಾಂಕ:ಮುಆಅ/ಪ್ರವ್ಯ/ಉಪ್ರವ್ಯ(ತೆರಿಗೆ)/ಸಪ್ರವ್ಯ(ತೆ)/ಹಿಸ(ತೆ)/20-21/ Cys-208
ಲಗತ್ತು:

ದಿನಾಂಕ: 26 MAY 2020

**ಸುತ್ತೋಲೆ**

ವಿಷಯ:-ಆರ್ಥಿಕ ವರ್ಷ 2020-21ರ (Assesment year-2021-22)ಸಾಲಿನ ವೇತನದಾರರು/ ಪಿಂಚಣಿದಾರರು ಸಲ್ಲಿಸಬೇಕಾದ ಆದಾಯ ತೆರಿಗೆ ರಿಟರ್ನ್ಸ್‌ನ್ನು ಆಯ್ಕೆ ಮಾಡುವ ಬಗ್ಗೆ.

ಉಲ್ಲೇಖ:-ಅಧೀನ ಕಾರ್ಯದರ್ಶಿ, ಕೇಂದ್ರಿಯ ಪ್ರತ್ಯೇಕ್ಷ ತೆರಿಗೆ ಮಂಡಳಿ, ಹಣಕಾಸು ಇಲಾಖೆ, ಭಾರತ ಸರ್ಕಾರ ರವರ ಅಧೀಸೂಚನೆ ಸಂಖ್ಯೆ: F.No.370142/13/2020-TPL, ದಿನಾಂಕ.13.04.2020.

************

ಆರ್ಥಿಕ ವರ್ಷ 2020-21 (ಕರಕರಣ ವರ್ಷ 2021-22ಕ್ಕೆ) ಸಂಬಂಧಿಸಿದಂತೆ ವೈಯಕ್ತಿಕ ವೇತನದಾರರ/ ಪಿಂಚಣಿದಾರರಿಗೆ ವರ್ಷದ ಅಂತ್ಯದಲ್ಲಿ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಲು ಈ ಕೆಳಕಂಡ ಎರಡು ಬಗೆಯ ಆಯ್ಕೆಯನ್ನು ನೀಡಲಾಗಿರುತ್ತದೆ.

1) ಯಾವುದೇ ರೀತಿಯ ಉಳಿತಾಯ/ವೆಚ್ಚದ ಕಡಿತವನ್ನು ಮಾಡದೇ ಸಿಬ್ಬಂದಿಯು ಪಡೆದ ಒಟ್ಟು ವೇತನದ ಮೇಲೆ ಆದಾಯ ತೆರಿಗೆ ರಿಟರ್ನ್ಸ್‌ನ್ನು ಸಲ್ಲಿಸುವುದು, ಇದು ಹೊಸ ಪದ್ಧತಿಯಾಗಿರುತ್ತದೆ.
2) ಈ ಹಿಂದಿನ ವರ್ಷಗಳಲ್ಲಿ ಇದ್ದಂತೆ ಹಳೆ ಪದ್ಧತಿ ಎಂದರೆ ವೇತನದಾರರು/ಪಿಂಚಣಿದಾರರಿಗೆ ಪಾವತಿಸುವ ಒಟ್ಟು ವೇತನದ/ಪಿಂಚಣಿಯ ಮೇಲೆ ಆದಾಯ ತೆರಿಗೆ ಕಾಯ್ದೆ, ಸೆಕ್ಷನ್ 80C ನಲ್ಲಿ ಹಾಗೂ ಇತರ ಅನ್ವಯಿಸುವ ಸೆಕ್ಷನ್/ನಿಯಮಗಳನ್ವಯ ಡಿಡಕ್ಷನ್ ಪಡೆದು ರಿಟರ್ನ್ಸ್ ಫೈಲಿಂಗ್ ಮಾಡುವುದು.
3) ಹೊಸ ತೆರಿಗೆ ಸಲ್ಲಿಸುವ ಪದ್ಧತಿ ಹಾಗೂ ಹಳೆಯ ಆದಾಯ ತೆರಿಗೆ ದರಗಳು ಈ ಕೆಳಕಂಡಂತಿವೆ ಹಾಗೂ ಅನ್ವಯಿಸುವ ಸೆಸ್ ದರಗಳು ಸಹ ಅನ್ವಯವಾಗುತ್ತದೆ.

| ಒಟ್ಟು ಆದಾಯದ ಮಿತಿ (ರೂಗಳಲ್ಲಿ) | ಹಾಲಿ ಚಾಲ್ತಿಯಲ್ಲಿರುವ ದರಗಳು (%) | ಹೊಸ ಆದಾಯ ತೆರಿಗೆ ದರ (%) |
|---|---|---|
| 0 to 2,50,000 | 0% | 0% |
| 2,50,001 to 5,00,000 | 5% | 5% |
| 5,00,001 to 7,50,000 | 20% | 10% |
| 7,50,001 to 10,00,000 | | 15% |
| 10,00,001 to 12,50,000 | 30% | 20% |
| 12,50,001 to 15,00,000 | | 25% |
| 15,00,001 and above | | 30% |

A) ಈ ಸಂಬಂಧ ವೇತನ ಬಟವಾಡೆ ಅಧಿಕಾರಿಗಳು ಹೊಸ ಆದಾಯ ತೆರಿಗೆ ಫೈಲಿಂಗ್ ಪದ್ಧತಿ ಅನುಸರಿಸುವ ವೇತನದಾರರಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಕ್ರಮಜರುಗಿಸತಕ್ಕದ್ದು:-

1) ಹಣಕಾಸು ವರ್ಷ 2020-21ರ ಆರಂಭದಲ್ಲಿ, ಹೊಸ ಆದಾಯ ತೆರಿಗೆ ರಿಟರ್ನ್ಸ್ ಮತ್ತು ಅಸ್ತಿತ್ವದಲ್ಲಿರುವ ಹಳೆ ಆದಾಯ ತೆರಿಗೆ ರಿಟರ್ನ್ಸ್ ಫೈಲಿಂಗ್‌ನ್ನು ಆಯ್ಕೆ ಮಾಡುವ ಸಂಬಂಧ ನೌಕರರಿಂದ ಘೋಷಣೆಯನ್ನು ಪಡೆಯತಕ್ಕದ್ದು.
2) ಸಿಬ್ಬಂದಿಗಳು ಒಮ್ಮೆ ಮಾಡಿದ ಆಯ್ಕೆಯನ್ನು ಆ ವರ್ಷದಲ್ಲಿ ಬದಲಾಯಿಸಲು ಅವಕಾಶವಿರುವುದಿಲ್ಲ.
3) ಆದಾಯ ತೆರಿಗೆ ಕಾಯ್ದೆಯ ಅಧ್ಯಾಯ VI-A ಮತ್ತು ಸೆಕ್ಷನ್ 10(13 A) ಹೆಚ್.ಆರ್.ಎ ಅಡಿಯಲ್ಲಿ ಮತ್ತು ಸೆಕ್ಷನ್ 24ರ ಅಡಿಯಲ್ಲಿ ಅನುಮತಿಸಲಾದ ಕಡಿತವನ್ನು ಇತ್ಯಾದಿಗಳನ್ನು ವೇತನದಾರರು ಹೊಸ ಯೋಜನೆ ಅಡಿಯಲ್ಲಿ ತ್ಯಜಿಸಬೇಕಾಗುತ್ತದೆ.

ಮು.ತಿ.ನೋ

4) ಕಡಿತ/ವಿನಾಯಿತಿ ಪಡೆಯಲು ವಿವಿಧ ಭತ್ಯೆಗಳು/ಹೂಡಿಕೆಗಳು ಹೊಸ ರಿಟರ್ನ್ಸ್ ಫೈಲಿಂಗ್ ಒಟ್ಟು ವೇತನದ ಪದ್ಧತಿಯಲ್ಲಿ ಕಡಿತಕ್ಕೆ ಅರ್ಹವಾಗುವುದಿಲ್ಲ.

5) ಹಾಗೂ ಆದಾಯ ತೆರಿಗೆ ಕಾಯ್ದೆಯ 1961ರ ಇತರೆ ನಿಯಮಗಳನ್ನು ಅನುಸರಿಸತಕ್ಕದ್ದು. ಹಾಗೂ ಅನ್ವಯಿಸುವ ದರಗಳಲ್ಲಿ ಟಿ.ಡಿ.ಎಸ್.ಅನ್ನು ವೇತನದಾರರಿಂದ ಕಟಾವು ಮಾಡಿ ಸರ್ಕಾರಕ್ಕೆ ಪಾವತಿಸಿ ಇ-ಫೈಲಿಂಗ್ ಮಾಡಿಸತಕ್ಕದ್ದು.

**B) ಹಳೆ ಆದಾಯ ತೆರಿಗೆ ರಿಟರ್ನ್ಸ್ ಮಾಡುವ ಪದ್ಧತಿಯಲ್ಲಿ ವೇತನದಾರರಿಗೆ ಸಂಬಂಧಿಸಿದಂತೆ ಆರ್ಥಿಕ ವರ್ಷ 2020-21ಕ್ಕೆ ಈ ಕೆಳಕಂಡಂತೆ ಕ್ರಮಜರುಗಿಸತಕ್ಕದು:-**

1) ಆರ್ಥಿಕ ವರ್ಷದ ಆರಂಭದಲ್ಲಿ ಅಸ್ತಿತ್ವದಲ್ಲಿರುವ ಹಳೆ ಆದಾಯ ತೆರಿಗೆ ರಿಟರ್ನ್ಸ್ ಫೈಲಿಂಗ್‌ನ್ನು ಆಯ್ಕೆ ಮಾಡಲು ಸಿಬ್ಬಂದಿಯಿಂದ ಹೇಳಿಕೆ/ ಘೋಷಣೆಯನ್ನು ಪಡೆಯುವುದು.

2) ಆರ್ಥಿಕ ವರ್ಷ 2020-21ಕ್ಕೆ ಸಂಬಂಧಿಸಿದ ಸಿಬ್ಬಂದಿಗಳ ಉಳಿತಾಯದ ವಿವರಗಳನ್ನು ಪಡೆಯುವುದು, ಅದರಂತೆ ಆದಾಯ ತೆರಿಗೆ ಲೆಕ್ಕ ಹಾಕಿ ಟಿ.ಡಿ.ಎಸ್ ಕಡಿತಗೊಳಿಸುವುದು ಹಾಗೂ ಸರ್ಕಾರಕ್ಕೆ ಪಾವತಿಸಿ ಇ-ಫೈಲಿಂಗ್ ಮಾಡಿಸತಕ್ಕದ್ದು.

3) ಸಿಬ್ಬಂದಿಗಳು ಒಮ್ಮೆ ಮಾಡಿದ ಆಯ್ಕೆಯನ್ನು ಆ ವರ್ಷದಲ್ಲಿ ಬದಲಾಯಿಸಲು ಅವಕಾಶವಿರುವುದಿಲ್ಲ.

4) ಆದಾಯ ತೆರಿಗೆ ಕಾಯ್ದೆಯ 1961ರ ಇತರೆ ನಿಯಮಗಳನ್ನು ಅನುಸರಿಸತಕ್ಕದ್ದು.

ತಪ್ಪಿದ್ದಲ್ಲಿ ಸಂಬಂಧಿಸಿದ ಅಧಿಕಾರಿ/ನೌಕರರೇ ನೇರ ಹೊಣೆಗಾರರಾಗಿರುತ್ತಾರೆ.

ಮುಖ್ಯ ಆರ್ಥಿಕ ಅಧಿಕಾರಿ.

ಪ್ರತಿಗಳು:-

- ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ. ಪ) ಚಾವಿಸನಿನಿ, ನಿಗಮ ಕಛೇರಿ, ಮೈಸೂರು, ರವರ ಮಾಹಿತಿಗಾಗಿ.
- ಮುಖ್ಯ ಇಂಜಿನಿಯರ್(ವಿ), ವಲಯ ಕಛೇರಿ, ಚಾವಿಸನಿನಿ, ಮೈಸೂರು/ಹಾಸನ, ರವರ ಮಾಹಿತಿಗಾಗಿ.
- ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ, ವೃತ್ತ ಕಛೇರಿಗಳು, ಮೈಸೂರು/ಹಾಸನ/ ಮಂಡ್ಯ/ಚಾಮರಾಜನಗರ ಮತ್ತು ಕೊಡಗು, ಚಾವಿಸನಿನಿ.
- ಉಪ ಪ್ರಧಾನ ವ್ಯವಸ್ಥಾಪಕರು (ಎ&ಆರ್)/(ಆಂ ನಿ),ನಿಗಮ ಕಛೇರಿ ಚಾವಿಸನಿನಿ, ಮೈಸೂರು.
- ಉಪ ಪ್ರಧಾನ ವ್ಯವಸ್ಥಾಪಕರು (ಎಂ.ಐ.ಎಸ್),ನಿಗಮದ ಅಧಿಕೃತ ಅಂತರ್ಜಾಲತಾಣದಲ್ಲಿ ಪ್ರಕಟಿಸಲು.
- ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು ಕಾರ್ಯ ಮತ್ತು ಪಾಲನೆ, ವೃತ್ತ ಕಛೇರಿಗಳು, ಮೈಸೂರು/ಹಾಸನ/ಮಂಡ್ಯ/ ಚಾಮರಾಜನಗರ ಮತ್ತು ಕೊಡಗು, ಚಾವಿಸನಿನಿ.
- ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಚಾವಿಸನಿನಿ. ತಮ್ಮ ಅಧೀನ ಕಛೇರಿಗಳಿಗೆ ಸದರಿ ಸುತ್ತೋಲೆಯನ್ನು ರವಾನಿಸತಕ್ಕದ್ದು.
- ಎಲ್ಲಾ ಲೆಕ್ಕಾಧಿಕಾರಿಗಳು (ಆಂ ಪ) ಕಾ ಮತ್ತು ಪಾ, ವಿಭಾಗಗಳು/ವೃತ್ತಗಳು/ಚಾವಿಸನಿನಿ.
- ಸಹಾಯಕ ಪ್ರಧಾನ ವ್ಯವಸ್ಥಾಪಕರು(ಆಂ ನಿ) ನಿಗಮ ಕಛೇರಿ, ಚಾವಿಸನಿನಿ. ಮೈಸೂರು.
- ಮುಕ.